1) Ambargodla - Kalasavalli
2) Hasarbaggi - Kollur
3) Talakalale - Kudugungi.

c) Yes.
d) No.
e) No.
f) The Department of Ports and Inland Water Transport maintains the ferry services.
g) Totally there are 4 launches.
h) Doe's not apply to this Department.
i) Not applicable.
j) Toll charges per passenger Rs. 1.00 for two wheelers Rs. 5.00
For Jeep/Car/Van Rs. 15/- (Ambargodlu)
For Jeep/Car/Can Rs. 30/- (Hasarmaggi)
For Bus Rs. 50-00
For Truck Rs. 40-00 (Ambargodllu)
For Truck Rs. 80-00 (Hasarmaggi)
There is no proposal before the Government to reduce the toll charges.
k) Not applicable.

241 (877) : ಶ್ರೀ ಗೋಪಾಲಕೃಷ್ಣ ಬೇಳೂರು .ಬಿ.ಕೆ. (ಸಾಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2000ರ ಸೆಪ್ಟೆಂಬರ್ 11 ಹಾಗೂ 2004ರ ನವೆಂಬರ್ 11 ಈ ಎರಡು ಅವಧಿಗಳಲ್ಲಿ ಶಿವಮೊಗ್ಗ ಜಿಲ್ಲೆ ಸಾಗರ ಪಟ್ಟಣದಲ್ಲಿ ನಡೆದಿರುವ ಸಾರ್ವಜನಿಕ ಗಣೇಶೋತ್ಸವದ ಸಂದರ್ಭಗಳಲ್ಲಿ ಗಲಭೆ ಮತ್ತು ಅಹಿತಕರ ಘಟನೆಗಳು ಜರುಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಘಟನೆಗಳಿಗೆ ಕಾರಣರಾರು;

ಇ) ಇದರಲ್ಲಿ ಸಾವು ನೋವಿಗೊಳಗಾದವರ ಸಂಖ್ಯೆ ಹಾಗೂ ಅಂದಾಜಿಸಲಾದ ಆಸ್ತಿ ಪಾಸ್ತಿ ನಷ್ಟ ಎಷ್ಟು;

ಈ) ಇದಕ್ಕೆ ಕಾರಣರಾದ ಎಷ್ಟು ಜನರನ್ನು ಬಂಧಿಸಲಾಗಿದೆ;

ಉ) ಈ ಪ್ರಕರಣದಲ್ಲಿ ಬಹಳಷ್ಟು ಮಂದಿ ಅಮಾಯಕರನ್ನು (ನಿರಪರಾಧೀಗಳು) ಅನಗತ್ಯವಾಗಿ ಈ ಮೊಕದ್ದಮೆಯನ್ನು ದಾಖಲಿಸಿ ಬಂಧಿಸಿರುವುದು ನಿಜವೇ;

ಊ) ಗಲಭೆಯಿಂದ ಬಂಧನಕ್ಕೊಳಗಾಗಿ ಬಿಡುಗಡೆಯಾದವರ ಸಂಖ್ಯೆ ಎಷ್ಟು;

ಋ) ಪ್ರಕರಣದಲ್ಲಿ ಶಿಕ್ಷೆಗೊಳಪಡಿಸಲು ಸಾಕಷ್ಟು ಸಾಕ್ಷಿ ಪುರಾವೆಗಳು ಸರ್ಕಾರಕ್ಕೆ ಸಿಕ್ಕಿವೆಯೇ;

ಎ) ಇಲ್ಲದಿದ್ದಲ್ಲಿ, ಅಮಾಯಕರುಗಳನ್ನು ಬಂಧಿಸಿರುವುದೇಕೆ ಅವರುಗಳನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು;

ಏ) ಇವರ ಮೇಲಿನ ಪೊಲೀಸ್ ಕೇಸುಗಳನ್ನು ಹಿಂದಕ್ಕೆ ಪಡೆಯಲು ಸರ್ಕಾರ ನಿರ್ಧರಿಸುವುದೇ?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಬಂದಿದೆ.

ಆ) ಸಮಾಜಘಾತುಕ ಶಕ್ತಿಗಳು ಮತ್ತು ಇತರೆ ದುಷ್ಕರ್ಮಿಗಳು ಕಾರಣರಾಗಿರುತ್ತಾರೆ.

ಇ) ಈ ಎರಡೂ ಘಟನೆಗಳಲ್ಲಿ ಯಾವುದೇ ಸಾವು ಸಂಭವಿಸಿರುವುದಿಲ್ಲ. ಆದರೆ 11.9.2000ರ ಘಟನೆಯಲ್ಲಿ 2 ಜನ ಗಾಯಗೊಂಡಿರುತ್ತಾರೆ. ಈ ಎರಡೂ ಘಟನೆಗಳಿಗೆ ಸಂಬಂಧಿಸಿದಂತೆ 1,2, ಆಸ್ತಿ ಪಾಸ್ತಿಗಳಿಗಾದರ ನಷ್ಟ ರೂ. 71,54,122.

ಈ) 103 ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದೆ.

ಉ) ಇಲ್ಲ.

ಊ) ದಸ್ತಗಿರಿಯಾದ ಎಲ್ಲಾ 107 ಆರೋಪಿಗಳು ಬಿಡುಗಡೆಯಾಗಿರುತ್ತಾರೆ.

ಋ) ಎಲ್ಲಾ ಘಟನೆಗಳಲ್ಲಿ ವಿವಾದ ಬಾಕಿ ಇರುತ್ತವೆ.

ಋ) ಹೌದು.

ಎ) ಈಗಾಗಲೇ ಎಲ್ಲಾ ಬಂಧಿತ ಆರೋಪಿಗಳು ಬಿಡುಗಡೆಗೊಂಡಿರುತ್ತಾರೆ.

ಏ) ಪರಿಶೀಲಿಸಲಾಗುವುದು.

242 (309) : ಶ್ರೀ ಹಾಲಪ್ಪ ಹೆಚ್. (ಹೊಸನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕುವೆಂಪು ಶತಮಾನೋತ್ಸವ ಕುಪ್ಪಳ್ಳಿ ಕಾರ್ಯಕ್ರಮಕ್ಕೆ ಸರ್ಕಾರದಿಂದ ಎಷ್ಟು ಹಣ ಬಿಡುಗಡೆಯಾಗಿದೆ.

ಆ) ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ರಂಗಮಂದಿರಗಳಿವೆ: ಈ ರಂಗಮಂದಿರಗಳಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು (ವಿವರ ತಿಳಿಸುವುದು)?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಶತಮಾನೋತ್ಸವ ಸಮಿತಿಯು ಕುವೆಂಪು ಶತಮಾನೋತ್ಸವ ಸಮಾರೋಪ ಸಮಾರಂಭವನ್ನು ಕುಪ್ಪಳ್ಳಿ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ನಡೆಸಲು ನಿರ್ಧರಿಸಿದ್ದು. ಈ ಎರಡು ಸ್ಥಳಗಳಿಗೆ ಐದು ಲಕ್ಷ ನಿಗಧಿಪಡಿಸಿ ಬಿಡುಗಡೆ ಮಾಡಿದೆ. ಕುವೆಂಪು ಪ್ರತಿಷ್ಠಾನಕ್ಕೆ 35.00 ಲಕ್ಷಗಳನ್ನು ಬಿಡುಗಡೆಮಾಡಲಾಗಿದೆ.

ಆ) ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು 12 ಬಯಲು ರಂಗಮಂದಿರಗಳ ನಿರ್ಮಾಣಕ್ಕೆ ಅನುದಾನ ನೀಡಿದೆ. ಒಟ್ಟು ರೂಪಾಯಿ ಎಂಟು ಲಕ್ಷ ಬಿಡುಗಡೆ ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.